ಕರ್ನಾಟಕ ಸರ್ಕಾರ ಸಿಆರ್‌ಪಿ.67

| |
|---|
| ಹೇಳಿಕೆ ಹಾಳೆ<br>ಆರ್‌ಪಿ.ಸಂ.57<br>ನಮೂನೆ ಸಂ.4<br>(ಸಿವಿಲ್) |

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, (ಎಂ.ಎ.ಸಿ.ಟಿ.) ಕುಂದಾಪುರ.**

**ಎಂ. ವಿ. ಸಿ. ಸಂಖ್ಯೆಃ 629/21 ಪಿ ಡಬ್ಲ್ಯೂಃ2**

**ಸಾಕ್ಷಿದಾರರ ಹೆಸರು** ಃ ರಘುರಾಜ್ ಕುಂದಗರ್

**ತಂದೆ ಹೆಸರು** ಃ ಸುರೇಶ್ ಕುಂದಗರ್

**ವಯಸ್ಸು** ಃ 43

**ವೃತ್ತಿ** ಃ ಅಸೋಸಿಯೇಟ್ ಪ್ರೊಫೆಸರ್ ಆರ್ತೋರ್ಪೆಡಿಕ್ ಕೆಎಂಸಿ ಮಣಿಪಾಲ

**ವಾಸ** ಃ ಮಣಿಪಾಲ

**<u>ದಿಃ 20-03-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಖ್ಯ ವಿಚಾರಣೆಃ-</u> ಶ್ರೀ ಬಿ ಎಸ್ ಎಚ್ ವಕೀಲರಿಂದ

ನಾನು ಈ ಪ್ರಕರಣದಲ್ಲಿ ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಈ ದಿನ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿಯ ಸಂಗತಿಗಳು ಸತ್ಯವಾಗಿವೆ.

ನಾನು ಅರ್ಜಿದಾರರಿಗೆ ನೀಡಿದ ಅಂಗನ್ಯೂನ್ಯತಾ ಪ್ರಮಾಣ ಪತ್ರ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-15 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-15 ಎ ಎಂದು ಗುರುತಿಸಲಾಯಿತು.

ನಾನು ಈ ದಿನ ಅರ್ಜಿದಾರ ಅಫ್ರೋಜ್ ಅಹ್ಮದ್ ರವರಿಗೆ ಸಂಬಂಧಪಟ್ಟ ವೈದ್ಯಕೀಯ ಕಡತ ನೋಡುತ್ತಿದ್ದು, ಅದನ್ನು ನಿಪಿ-19 ಎಂದು ಗುರುತಿಸಲಾಯಿತು. ಹಾಗೂ ಒಟ್ಟು 5 ಎಕ್ಸರೇ ಫಿಲಂಗಳನ್ನು ನೋಡುತ್ತಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u> 2 ನೇ ಎದುರುದಾರ ಪರ ವಕೀಲರಾದ ಶ್ರೀ ಎನ್ ವಿ ಆರ್ ರವರಿಂದ**

ಅರ್ಜಿದಾರರನ್ನು ನಾನು ಕ್ಲಿನಿಕಲ್ ಪರೀಕ್ಷೆ ಒಳಪಡಿಸಿ ಮತ್ತು ಎಕ್ಸರೇ ಆಧಾರದ ಮೇಲೆ ಅವನ ದೈಹಿಕ ನ್ಯೂನ್ಯತೆಯನ್ನು ಅಳೆದಿದ್ದೇನೆ ಎಂದರೆ ಸರಿ. ಗಾಯಾಳುವಿಗೆ ಆದಂತಹಾ ಮೂಳೆ ಮುರಿತ ಸಂಪೂರ್ಣವಾಗಿ ಕೂಡಿಕೊಂಡಿದೆ. ಗಾಯಾಳುಗೆ ಎರಡು ತೊಡೆಯ ಮೂಳೆ ಮುರಿತ ಕಂಡು ಬಂದಿದ್ದು, ಅದನ್ನು

ಹೊರತುಪಡಿಸಿ ಅವನ ಉಳಿದ ದೇಹದ ಯಾವುದೇ ಭಾಗದಲ್ಲಿ ಬೇರೆ ಯಾವುದೇ ಮೂಳೆ ಮುರಿತ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ದೇಹದ ಉಳಿದ ಭಾಗದಲ್ಲಿ ಯಾವುದೇ ಚಲನ ವಲನಕ್ಕೆ ಕುಂಠಿತವಾಗಿದ್ದು ನನಗೆ ಕಂಡು ಬಂದಿಲ್ಲ ಎಂದು ನುಡಿಯುತ್ತಾರೆ. ಮ್ಯಾಕ್ಸಿಲೋ ಫೇಶಿಯಲ್ ವಿಭಾಗದವರು ಗಾಯಾಳುವಿಗೆ ಮೂಳೆ ಮುರಿತ ಆದ ಬಗ್ಗೆ ಯಾವುದೇ ಅಂಗನ್ಯೂನ್ಯತಾ ದೃಢಪತ್ರ ನೀಡಿಲ್ಲ. ಗಾಯಾಳುವಿಗೆ ಪ್ರಥಮ ಹಂತದಲ್ಲಿ ಗಟ್ಟಿ ಪದಾರ್ಥ ತಿಂಡಿ ಸೇವಿಸಲು ಸೂಚಿಸಿಲ್ಲ. ನಂತರ ಅವನಿಗೆ ಸಾಮಾನ್ಯವಾದ ಆಹಾರ ಪದ್ಧತಿಯನ್ನು ಅಳವಡಿಸಲು ಸೂಚಿಸಲಾಗಿದೆ. ದಿ:29-08-2022 ರಂದು ನಾನು ಗಾಯಾಳುವಿಗೆ ಕೊನೆಯ ಬಾರಿಗೆ ಚಿವಿತ್ಸೆ ನೀಡಿರುತ್ತೇನೆ. ಈಗ ಗಾಯಾಳುವಿಗೆ ಯಾವುದೇ ಒಳ ಸಾಧನ ಇದ್ದ ಬಗ್ಗೆ ನಿಖರವಾಗಿ ನಿಮಗೆ ಹೇಳಲಿಕ್ಕೆ ಸಾಧ್ಯವಿಲ್ಲ ಎಂದರೆ ಸಾಕ್ಷಿ ನಾನು ಕೊನೆಯ ಬಾರಿಗೆ ಪರೀಕ್ಷೆ ಮಾಡಿದಾಗ ಅವನ ದೇಹದಲ್ಲಿ ಒಳ ಸಾಧನ ಇತ್ತು. ಗಾಯಾಳು ತನಗೆ ಅಳವಡಿಸಿದ ಒಳ ಸಾಧನವನ್ನು ತೆಗೆಸಿದ್ದಾನೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲಾ. ಔಷಧ ಕಡತದಲ್ಲಿ ಗಾಯಾಳುವಿನ ವೃತ್ತಿ ಕೂಲಿ ಅಂತ ಕಂಡು ಬರುತ್ತದೆ ಎಂದರೆ ಸರಿ. ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಸಂಪೂರ್ಣ ಸುರಕ್ಷಾ ಯೋಜನೆಯಡಿಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದ ಅಂತ ಕಡತದಲ್ಲಿ ನಮೂದಾಗಿದೆ ಎಂದರೆ ಸರಿ. ಗಾಯಾಳುವಿಗೆ ಚಲನ ವಲನ ಸುಧಾರಿಸಲು ವ್ಯಾಯಾಮ ಚಿಕಿತ್ಸೆಯನ್ನು ಸೂಚಿಸಿದ್ದೆನು. ಗಾಯಾಳುವಿಗೆ ತೀರ್ಥಹಳ್ಳಿ ಮತ್ತು ಶಿವಮೊಗ್ಗದಲ್ಲಿ ಚಿಕಿತ್ಸೆ ಮುಂದುವರಿಸಲು ನಾನು ಸೂಚಿಸಿಲ್ಲ. ಅಪಘಾತ ಪೂರ್ವದಲ್ಲಿ ಏನೇನು ಕೆಲಸ ಮಾಡುತ್ತಿದ್ದ ಅವುಗಳನ್ನು ಮಾಡಬಾರದು ಎನ್ನುವ ಬಗ್ಗೆ ನಾನು ಗಾಯಾಳುವಿಗೆ ಸೂಚಿಸಿಲ್ಲ. ಗಾಯಾಳುವಿಗೆ ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಒಂದು ವರ್ಷ ವಿಶ್ರಾಂತಿ ಬೇಕೆಂದು ಸೂಚಿಸಿರುತ್ತೇನೆ. ಈ ಬಗ್ಗೆ ಕಡತದಲ್ಲಿ ನಮೂದಿದೆ. ನಾನು ನೀಡಿದ ನ್ಯೂನ್ಯತೆಯು ಗಾಯಾಳುವಿನ ಎರಡೂ ಕಾಲಿನ ತೊಡೆಯ ಮೂಳೆಗೆ ಸಂಬಂಧಪಟ್ಟಿದ್ದು. ದಿನಾಂಕ:29-08-2022 ರಂದು ನಾನು ಗಾಯಾಳುವಿನ ನ್ಯೂನ್ಯತೆಯನ್ನು ಅಳೆದಿದ್ದೇನೆ. ಆ ದಿನ ನಾನು ಅಳೆದಿದ್ದ ಗಾಯಾಳುವಿನ ನ್ಯೂನ್ಯತೆ ಆ ದಿನಕ್ಕೆ ಸಂಬಂಧಪಟ್ಟದ್ದಾಗಿದೆ ಎಂದರೆ ಸಾಕ್ಷಿ ಸರಿ ಅಂತ ನುಡಿಯುತ್ತಾರೆ. ಇಡೀ ದೇಹಕ್ಕೆ ಹೋಲಿಸಿದ್ದಲ್ಲಿ ನಾನು ನೀಡಿದ ನ್ಯೂನ್ಯತಾ ಪ್ರಮಾಣವು 1/3 ಅಂಶ ಆಗುತ್ತದೆ ಎಂದರೆ ಸಾಕ್ಷಿ ನನಗೆ ಹೇಳಲಿಕ್ಕೆ ಬರುವುಲ್ಲ ಅಂತ ನುಡಿಯುತ್ತಾರೆ. ದಿ:03-03-2022 ರಂದು ನಾನು ಕೊನೆಯ ಬಾರಿಗೆ ಔಷಧಿಗಳನ್ನು ತೆಗೆದುಕೊಳ್ಳಲು ಸಲಹೆ ನೀಡಿದ್ದೇನೆ. ಗಾಯಾಳುವಿಗೆ ಹೆಚ್ಚಿನ ನ್ಯೂನ್ಯತೆಯನ್ನು ಕಾಣಿಸಿ ಅವನಿಗೆ ಸಹಾಯವಾಗುವಂತೆ

ನ್ಯೂನ್ಯತಾ ಪ್ರಮಾಣ ಪತ್ರವನ್ನು ನಾನು ನೀಡಿದ್ದೇನೆ ಎಂದರೆ ಸರಿ ಅಲ್ಲಾ. ಗಾಯಾಳುವಿನ ಎರಡೂ ಕಾಲುಗಳು ಸಪೂರವಾಗಿದೆ ಆದರೆ ಉದ್ದಳತೆಯಲ್ಲಿ ಕಡಿಮೆ ಆಗಿಲ್ಲ. ನನ್ನ ನ್ಯೂನ್ಯತಾ ಪ್ರಮಾಣ ಪತ್ರವನ್ನು ದೃಢೀಕರಿಸಲಿಕ್ಕೆ ಯಾವುದೇ ವೈಜ್ಞಾನಿಕ ವರದಿ ಇಲ್ಲಾ ಎಂದರೆ ಸಾಕ್ಷಿ ಎಕ್ಸರೇ ಮಾತ್ರ ಉಂಟು ಬೇರೆ ವರದಿ ಇಲ್ಲಾ ಎಂದು ನುಡಿಯುತ್ತಾರೆ. ನಾನು ನೀಡಿದ ನ್ಯೂನ್ಯತಾ ಪ್ರಮಾಣ ಪತ್ರ ಸತ್ಯಕ್ಕೆ ದೂರವಾದದ್ದು ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**(ಎಂ.ಎ.ಸಿ.ಟಿ.) ಕುಂದಾಪುರ**